112(2)

'SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 25] ಶನಿವಾರ 27—10—45 [ಬಿಡಿ ಪ್ರತಿ 3 ಪೈ

ವಾರ್ತಾತರಂಗ

ಮದರಾಸಿನ ಶ್ರೀ ಲಕ್ಷ್ಮೀಕಾಂತಂ ಖೂನಿಮೊಖದ್ದಮೆಯಲ್ಲಿ ಕೃಷ್ಣನುಂತಹವರು ಹೈಕೋರ್ಟಿನಲ್ಲಿ ಮಾಡಿದ್ದ ಅಪೀಲಿನ ವಾದವಿವಾದಗಳು ಮುಗಿದು, ಸೋಮವಾರ ತೀರ್ಪು ಕೊಡಲಾಗುವುದು.

ಂ ಂ

ಸಂ' ಬೀಪುರದ 15 ವರ್ಷ ಯೋಜನೆಯಲ್ಲಿ 10 ಮಂದಿಯು ಹಳ್ಳಿಗೂ ಒಂದು ಪೋಸ್ಟಾಫೀಸಿನ ಏರ್ಪಾಡಿದೆ.

ಂ ಂ

ಷೋಲಾಪುರದ ಹೋಟಲುಗಳಲ್ಲಿ ಹಾಲಿನ ಪುಡಿ ಉಪಯೋಗಿಸಲ್ಪಡುವ ದೆಂದುತಿಳಿಯಬಂದಿದೆ.

ಂ ಂ

ಅಣು ಶಕ್ತಿಯನ್ನು ಶಾಂತಿ ಸೌಖ್ಯ ಗಳಿಗಾಗಿ ಉಪಯೋಗಿಸಬೇಕೆಂದು ಬ್ರಿಟಿಷ್ ರಾಜರು ಆಶಿಸಿರುವರು.

ಂ ಂ

ಭರತಪುರದ ಪ್ರಜಾಮಂಡಲಿ ಕಾರ್ಯದರ್ಶಿ ಶ್ರೀ ರಾಜ ಬಹದ್ದೂರರು ಪಸ್ಕಗಿರಿಮಾಡಲ್ಪಟ್ಟಿದಾರೆ.

ಂ ಂ

ನಾಳೆಯ ದಿವಸ ಮೈಸೂರು ಟ್ರೇಡ ಯೂನಿಯನ್ ಕಾಂಗ್ರೇಸಿನಲ್ಲಿ ಅಗ್ನೇಯ ಏಷ್ಯಾ ದಿನಾಚರಣೆ ನಡೆಯುತ್ತೆ.

ಂ ಂ

ಸಾಲ್ಯನೇ ಯುದ್ಧ ಪಾತಕಿ ಹುಟ್ಟು ನಾಜೀ ಕಾರ್ಮಿಕ ಮುಖಂಡ ಲೇ ನೇಣು ಹಾಕಿಕೊಂಡನು.

STOP PRESS

ಸಂತಾಪ ಸೂಚನೆ

ಮೈಸೂರು ತಾ 27

ಈ ದಿವಸ ಸ್ಥಳೀಯ ಪೌರಸಭಾಧಿವೇಶನದಲ್ಲಿ ಕ|| ದೇಶಕತಾಜಿ ಅರಿಸಿನವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವಾಯಿತು.

ಆಗಮನ

ಶ್ರೀಮಾನ್ ಬುಲುಸು ಸಾಂಬಮೂರ್ತಿಯವರು ಮುಂದಿನ ತಿಂಗಳು 17 ರಲ್ಲಿ ಮೈಸೂರಿಗೆ ಬರುವರು.

ಚುನಾವಣೆಯಲ್ಲಿ ಕಾಂಗ್ರೇಸಿಗೆ ವಿಜಯಾರಂಭ

ಸೆಂಟ್ರಲ್ ಅಸೆಂಬ್ಲಿಗೆ ಬೊಂಬಾಯಿ ಪ್ರಾಂತ್ಯದಿಂದ ಇಬ್ಬರೂ, ಮಧ್ಯ ಪ್ರಾಂತ್ಯದಿಂದ ಇಬ್ಬರೂ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾಗಿರುತ್ತಾರೆ. ತಮಿಳು ನಾಡಿನಲ್ಲಿ ವ್ಯಾಪಾರಿ ಕ್ಷೇತ್ರದಿಂದ ಪ್ರತಿಸ್ಪರ್ಧಿಸಬೇಕೆಂದಿದ್ದ ಶ್ರೀ ರತ್ನ ಸಭಾಪತಿ ಮೊದಲಿಯಾರರು ತಾವು ಸ್ಪರ್ಧಿಸುವುದನ್ನು ಬಿಟ್ಟುದಲ್ಲದೆ, ಕಾಂಗ್ರೆಸ್ ಸದಸ್ಯರಾದ ಶ್ರೀ ರಾಮಲಿಂಗಂಷಟ್ಟಿಯಾರರಿಗೆ ಬೆಂಬಲಕೊಡುವವರಾಗಿದ್ದಾರೆ.

.....

ವಿಚಾರಣೆ ಮುಂದುವರಿಸಲ್ಪಡುವುದಿಲ್ಲ

ಇಂಡಿಯನ್ ನಾವಲ್ ಆರ್ಮಿ ಅಪಾದಿತರ ವಿಚಾರಣೆಯನ್ನು ಮಹಾ ಚುನಾವಣಾನಂತರದವರೆಗೆ ಮುಂದುವರಿಸಬೇಕೆಂದು ಅಪಾದಿತರು ಮಾಡಲ್ಪಟ್ಟ ಪ್ರಾರ್ಥನೆಯು ನಿರಾಕರಿಸಲ್ಪಟ್ಟಿದೆ.

.....

ಜೈನಾದ ಪುಣ್ಯ ಫಲ

ಜೈನಾದಲ್ಲಿ ಹೈದ್ರೋಗದಿಂದ ನರಳುವವರ ಸಂಖ್ಯೆ ಬಹಳ ಕಡಿಮೆ.

ಅಭಿವೃದ್ಧಿಗಾಗಿ ಹಣದ ಮಂಜೂರಾತಿ

ಹೈದರಾಬಾದಿನಲ್ಲಿ ಅಭಿವೃದ್ಧಿ ಕಾರ್ಯಕ್ಕೆ 347 ಕೋ ಯೋ ಜ ನೆ ತಯಾರಾಗಿದೆ.

ಪಂ || ಪುರಾಣಿಕರಿಗೆ

ಪ್ರಶಸ್ತಿ ಸನ್ಮಾನ

ಅಖಿಲ ಕರ್ನಾಟಕ ಆಯುರ್ವೇದ ಮಂಡಲದ ಕಾರ್ಯದರ್ಶಿಯವರಾಗಿರುವ ಪಂಡಿತ ಕೆ ಪಿ ಪುರಾಣಿಕರವರಿಗೆ ಅಖಿಲ ಭಾರತ ಧನ್ವಂತರಿ ಮಹಾ ಮಂಡಲದ ಶ್ರೀ ಕಾಶೀಕ್ಷೇತ್ರದಲ್ಲಿರುವ ವಿದ್ಯಾಪೀಠದ ಅಧ್ಯಕ್ಷರು ನಡೆದ ವಿಜಯದಶಮಿ ಉತ್ಸವದಲ್ಲಿ "ವಿದ್ಯಾಭೂಷಣ" ಎಂಬ ಪ್ರಶಸ್ತಿ ಸನ್ಮಾನ ಮಾಡಿರುವುದು ಕನ್ನಡಿಗರೆಲ್ಲರಿಗೂ ಆನಂದವನ್ನುಂಟು ಮಾಡುವುದು. ಪಂಡಿತರು ಆಯುರ್ವೇದದಲ್ಲಿ ಮಾತ್ರವಲ್ಲದೆ ಪತ್ರಿಕೆಗಳಿಗೂ ಸೇವೆ ಸಲ್ಲಿಸಿರುವರು; ಸಲ್ಲಿಸುತ್ತಲೂ ಇರುವರು. ಆದುದರಿಂದ ಪತ್ರಿಕೋದ್ಯೋಗಿ ಸಂಘಕ್ಕೆ ಪಂಡಿತರನ್ನು ಆಹ್ವಾನಿಸಿ, ಸತ್ಕರಿಸಿ ಅಭಿನಂದಿಸಿ ಸಂತೋಷ ಪಡಬೇಕಾಗಿ ಪ್ರಾರ್ಥನೆ.

ಪ್ರತಿಭಟನೆ

ಅನ್ನಾಮೈಟ್ ಸೇನೆಗಳು ಸೈಗಾನ್ ಗೆ ಉತ್ತರದಲ್ಲಿ ಭಾರತ ಮತ್ತು ಫ್ರೆಂಚ್ ಸೇನೆಗಳನ್ನು ತೀವ್ರವಾಗಿ ಪ್ರತಿಭಟನೆ ಮಾಡುತ್ತಿದೆ.

ಮೃತ್ಯು ಸ್ಮಾರಕ

ನಾಗಸಾಕಿಯಲ್ಲಿ ಅಣುಬಾಂಬಿನಿಂದ ಸತ್ತವರ ಜ್ಞಾಪಕಾರ್ಥವಾಗಿ ಸ್ಮಾರಕ ಸ್ತಂಭವನ್ನು ನಿರ್ಮಿಸುವ ಏರ್ಪಾಡು ನಡೆಯುತ್ತಿದೆ.

ದಿನಾಚರಣೆ

ನಿನ್ನೆಯ ದಿನವನ್ನು ಬೆಂಗಳೂರಿನಲ್ಲಿ ಮುಸ್ಲಿಂ ಲೀಗಿನವರು ಪ್ಯಾಲಿಸ್ಟೈನ್ ದಿನಾಚರಣೆ ಆಚರಿಸಿರದರಂತೆ.

No. R 7- 61/45-46

ಮೈಸೂರು ಸಿಟಿ ರೇಷನಿಂಗ್

1945 ನೇ ಅಕ್ಟೋಬರ್ ಮಾಹೆ 31 ನೇ ತಾರೀಖಿನ ದಿವಸ, ಮೈಸೂರು ಸಿಟಿಯಲ್ಲಿರುವ ಬಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋದಾಮಿನ, ಪರ್ಮಿಟ್ ಕರ ಡಿಪೋ, ಮತ್ತು ಸಹಕಾರ ಸಂಘಗಳಲ್ಲಿರುವ ದಿಸ್ತಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಸದರಿ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ. ರೆಡ್ಡಿ

19—10—45 ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಸಾಮ್ರಾಜ್ಯಗಳ ಪರೀಕ್ಷೆಯ ಕಾಲ

(ನಿನ್ನೇ ಸಂಚಿಕೆಯಿಂದ ಮುಂದುವರಿದುದು)

ಆಸ್ಟ್ರೇಲಿಯಾದಲ್ಲಿ ಅಲ್ಲಿಯ ಕೂಲಿಕಾರರು ಜಾವಾಕ್ಕೆ ಸರಬರಾಯಿ ತೆಗೆದುಕೊಂಡು ಹೋಗಲು ಕಾದಿರುವ ಡಚ್ಚ ಹಡಗುಗಳಲ್ಲಿ ಕಲಸ ಮಾಡುದಂತೆ ಮುಷ್ಕರ ಹಿಡಿದಿರುವರು. ಹಿಂದೀ ಸೈನಿಕರು ಯಾವದಕ್ಕಾಗಿ ತಮ್ಮ ಪ್ರಾಣ ಗುಂಡುಗಳನ್ನು ಇಂಡೋಚೀನಿಯರ ಮೇಲೆ ಉಪಯೋಗಿಸಬೇಕೆಂದು ಶಂಖಿಸುತ್ತಿರುವರು. ಜಾವಾ ಮತ್ತು ಇಂಡೋಚೀನಾಗಳಲ್ಲಿ ಅಲ್ಲಿಯ ಜನರು ಶ್ವೇತ ಜನರ ಮೇಲೆ ಅಸಹಕಾರಶಸ್ತ್ರವನ್ನು ಉಪಯೋಗಿಸಿ ಅವರಿಗೆ ಯಾವ ಸಾಮಾನು ಕೂಡ ದೊರೆಯದಂತೆ ಮಾಡುತ್ತಿರುವರು. ಇದನ್ನೆಲ್ಲ ಅಮೇರಿಕವು ತಾಟಸ್ಥ್ಯ ವಹಿಸಿ ನೋಡುತ್ತಿರುವುದು. ಈ 'ದಂಗೆ' ಅಡಗುವವರೆಗೂ ತಾವು ಯಾವ ಸಂಧಾನ ಮಾಡಲು ಬಯಿಸುವುದಿಲ್ಲವೆಂದು ಡಚ್ ಸರ್ಕಾರವು ಪ್ರಕಟಿಸಿದೆ. ಜಾವಾದಲ್ಲಿಯ ಡಚ್ ಸೇನಾಸಿಯು ಡಚ್ ಸರ್ಕಾರದ ಈ ಕೃತಿಯ ನಿಷೇದಾರ್ಥವಾಗಿ ತನ್ನ ಕೇಸಕ್ಕೆ ರಾಜೀನಾಮೆ ಕೊಟ್ಟು ಹಾಲೆಂಡು ತನ್ನ ಸ್ವಾತಂತ್ರ್ಯಕ್ಕೆ ಅದೇ ಸ್ವಾತಂತ್ರ್ಯವನ್ನು ಜಾವಾಕ್ಕೆ ಕೊಡಲು ತಿರಸ್ಕರಿಸುವುದು ಅನುಚಿತವೆಂದು ಹೇಳಿರುವನು. ಬ್ರಿಟಿಷ್ ಪತ್ರಿಕೆಗಳೆಲ್ಲವೂ ತಮ್ಮ ಸರ್ಕಾರದ ಕೃತಿಯನ್ನು ಸಮರ್ಥಿಸುತ್ತಾ ಅಲ್ಲಿ ಶಾಂತಿ ನೆಲೆಸುವವರೆಗೂ ಬ್ರಿಟಿಷರು ತಮ್ಮ ಸೈನ್ಯವನ್ನು ಇಡುವುದು ಅವಶ್ಯಕವೆಂದು ಹೇಳುತ್ತಿರುವವು. ಅಶಾಂತಿಯಿದ್ದರೆ ದಂಗೆಯೆಂತಲೂ, ಶಾಂತತೆಯಿದ್ದರೆ ಸ್ವರಾಜ್ಯದ ಬೇಡಿಕೆಯಿಲ್ಲದೆ ಈ ಜನತಾಂಗಗಳು ವಿದೇಶಿ ಪ್ರಭುತ್ವವನ್ನು ಸುಸ್ಥಿರಪಡಿಸುತ್ತಲಿವೆಯೆಂದು ಹೇಳುವುದು ಈ ಪತ್ರಿಕೆಗಳ ಪದ್ಧತಿಯಾಗಿಯೇ ಪರಿಣಮಿಸಿದೆ. ಅಂತೂ ಈ ಫಾಸಫಿಕ್ಕದಲ್ಲಿ ಸ್ವಾತಂತ್ರ್ಯ ಯುದ್ಧವು ನಡೆಯುತ್ತಲೇ ಇದೆ. ಇಲ್ಲಿ ಫ್ರೆಂಚರು ಮತ್ತು ಡಚ್ಚರು ತಮ್ಮ ಸಾಮ್ರಾಜ್ಯವನ್ನು ಇಂಗ್ಲೀಷ್ ಸಹಾಯದಿಂದ ತಿರುಗಿ ಸಂಪಾದಿಸಿಕೊಳ್ಳಲು ಶಕ್ತರಾದರೆ ಈ ಎರಡನೆ ಪ್ರಪಂಚ ಮಹಾಯುದ್ಧವು ಜಯಸ್ಪದವಾಗಿ ಕೊನೆಗೊಂಡುವ್ಯರ್ಥವೆಂದು ಅಲ್ಲಿಯ ಜನರು ತಿಳಿದುಕೊಳ್ಳುವುದರಲ್ಲಿ ಏನೂ ಆಶ್ಚರ್ಯವಲ್ಲ. ಇಂತಹ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯದ ಪ್ರೇಮಿಯಾದ ಅಮೇರಿಕಾಕ್ಕೆ ಒಂದು ಜವಾಬ್ದಾರಿಕೆಯನ್ನು ನಿರ್ವಹಿಸಲು ಅದು ಈಗ ಸಿದ್ಧವಿದೆಯೇ? ಫ್ಯಾಲಿಸ್ತಾನದಲ್ಲಿ ಯಹೋದಿಯರ ಬೆಂಬಲಕ್ಕೆ ಬಂದಂತೆ ಅಮೇರಿಕಾವು ಜಾವಾ ಮತ್ತು ಇಂಡೋಚೀನಾದ ಜನರ ಬೆಂಬಲಕ್ಕೆ ಬರುವುದೇ? (ನ. ಸಂ)

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.



ಆ ಮ ಶಂ ಕೆ
ಅ ತಿ ಸಾ ರ ಗ ಳಿ ಗೆ
.... ಖಾತ್ರಿ ....
ಗು ಣ ಕಾ ರಿಯಾ ದ
ಡಿಸೆಂಟಿಸೆಡ್
ಲ
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹುಂಚುವರರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

AT Opera—
3 rd Week
ರಂಜಕ್, ಟಿ. ಆರ್, ರಾಜಕ್ಕುಮ್ಮಾ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ
ಶಾಲಿವಾಹನ
Morning Shows
From 26-10-45
In Old California
At Ranjit
Humayun
7 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂನ್....
ಅಶೋಕ ಕುಮಾರ್, ಚಂದ್ರಮೋಹನ್
ನೀಣಾ, ನರ್ಗಿಸ್,, ಪ್ರಾಣವಾಸ್
ಪಾತ್ರವಹಿಸಿರುವರು

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.